# ಗೋ ವಿಶ್ವ

Cow Universe

गौ विश्व

ಸರ್ವಜಿತ್ ಸಂವತ್ಸರ | ಮಾಘ-ಫಾಲ್ಗುಣ | ಮಾರ್ಚ್ ೨೦೦೮ | ಸಂಪುಟ-೨ | ಸಂಚಿಕೆ-೩

ಗುರುವಾಣಿ

## ರಾಮತತ್ತ್ವದ ಅವತರಣ



ಪ್ರಿಯ ದೇಶ ಬಂಧುಗಳೇ,

ವಸಂತಾಗಮನದೊಂದಿಗೆ ಮತ್ತೊಂದು ಯುಗಾದಿಯ ಸ್ವಾಗತಕ್ಕೆ ನಿಸರ್ಗ ಪಲ್ಲವಿಸುತ್ತಿದೆ. ಸಮಕಾಲೀನ ಸಂಕೀರ್ಣ ಕಾಲಘಟ್ಟದಲ್ಲಿ ಪ್ರತಿಯೊಂದು ಯುಗದ ಆದಿಯೂ ತನ್ನದೇ ಆದ ಪ್ರಾಮುಖ್ಯವನ್ನು ಹೊಂದಿದೆ.

ಭರತ ವರ್ಷದ ಪರಂಪರೆಯಲ್ಲಿ ಸಂವತ್ಸರದ ಆರಂಭವೆಂದರೆ ಮಹಾ ಸಂಕಲ್ಪವೊಂದಕ್ಕೆ ನಿಗದಿಪಡಿಸಲಾದ ದಿನ. ಭವಿಷ್ಯದ ಸಾಧನೆಗಳಿಗಡಿಯಿಡಲು ಅಂದು ಕಂಕಣ ಮುಹೂರ್ತ. ಶ್ರೀ ರಾಮಚಂದ್ರಾಪುರ ಮಠದ ಮಟ್ಟಿಗೆ ಹೇಳುವುದಾದರೆ ಯುಗಾದಿಯೊಂದಿಗೇ ಉಪಾಸ್ಯದೈವದ ಆರಾಧನೆಯ ದಿವ್ಯ ಕ್ಷಣಗಳಿಗೆ ಸಿದ್ಧತೆ ಆರಂಭವಾಗುತ್ತದೆ. ಅನುಪಮ ಮೂರ್ತಿ, ಸತ್‌ಚಿತ್ ಸ್ವರೂಪಿಯಾದ ಶ್ರೀ ರಾಮನ ಉತ್ಸವಕ್ಕೆ ಈ ವರ್ಷವೂ ಹೊರತಲ್ಲ. ಶ್ರೀ ಶಂಕರ ಭಗವತ್ಪಾದರಿಂದ ಸ್ಥಾಪಿತವಾದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಶ್ರೀರಾಮನವಮಿಗೆ ಇನ್ನಿಲ್ಲದ ಮಹತ್ವ. ರಾಮಾಯಣ ಕಾಲದ ಅಗಸ್ತ್ಯ ಮಹರ್ಷಿಗಳು ತಮ್ಮ ಶಿಷ್ಯರಾದ ವರದ ಮುನಿಗಳಿಗೆ ಅನುಗ್ರಹಿಸಿದ ಶ್ರೀ ರಾಮಾದಿ ವಿಗ್ರಹಗಳು ಇಲ್ಲಿ ಅನೂಚಾನವಾಗಿ ಪೂಜೆಗೊಳ್ಳುತ್ತ ಬಂದಿರುವುದು ವಿಧಿತ. ಅದು ಶ್ರೀ ಮಠದ ಅನನ್ಯತೆಯೂ ಸಹ.

ಇತ್ತೀಚಿನ ದಿನಗಳಲ್ಲಿ ಅಂಥ ಆರಾಧನೆಗೆ ಶ್ರೀ ರಾಮೋತ್ಸವದ ಪರಿಕಲ್ಪನೆಯನ್ನು ನೀಡಲಾಗಿದೆ. ಇದೇ ಮಾಲಿಕೆಯಲ್ಲಿ ಸಾಕಾರಗೊಂಡ 'ಶ್ರೀ ರಾಮಾಯಣ ಮಹಾಸತ್ರ' ಐತಿಹಾಸಿಕ ಮೈಲುಗಲ್ಲನ್ನು ಸ್ಥಾಪಿಸಿದೆ. ಈಗ 'ಶ್ರೀ ರಾಮಸತ್ರ' ಇಂಥ ಇನ್ನೊಂದು ವಿನೂತನ ಸಂಕಲ್ಪ.

ರಾಮಾರಾಧನೆಯೇ ಏಕೆ? ಎಂಬುದು ಸಹಜ ಪ್ರಶ್ನೆ. ಇದಕ್ಕೆ ಪರಂಪರೆಯ ಸಮರ್ಥನೆ ಒಂದೆಡೆ. ಅದರಿಂದ ಹೊರತಾಗಿಯೂ ಸಮಾಜದ ಇಂದಿನ ಸಂಕ್ಷೋಭೆಗೆ ಶ್ರೀ ರಾಮನೊಬ್ಬನೇ ಉತ್ತರವಾಗುತ್ತಾನೆ ಎಂಬುದು ನಮ್ಮ ವಿಶ್ವಾಸ.

ರಾಮರಾಜ್ಯ ಕೇವಲ ಕಲ್ಪನೆಯಲ್ಲ. ಅದು ವಾಸ್ತವ ಘಟನಾವಳಿಗೆ ಕೊಟ್ಟ ಒಟ್ಟಾರೆ ವ್ಯಾಖ್ಯಾನವೆಂಬುದು ನಮ್ಮ ಸ್ಪಷ್ಟ ಅಭಿಮತ. ರಾಮರಾಜ್ಯವೆಂದರೆ ಸುಖ-ಸಮೃದ್ಧಿಗಳ ಆಗರ. ಸ್ಥಾಪಿತ ನಂಬಿಕೆಗಳಿಂದ ಹೊರತಾಗಿಯೂ ದ್ವೇಷಾಸೂಯೆ, ವೈರ-ವಿಪ್ಲವ, ದುಃಖ-ದಾರಿದ್ರ್ಯಗಳಿಗೆ ಅಲ್ಲಿ ಅವಕಾಶವೇ ಇರಲಿಲ್ಲ. ಇದು ಸ್ತುತಿಯಲ್ಲ; ಅತಿಶಯವಲ್ಲ; ಸಕಾರಣಯುಕ್ತ ವಿಶ್ಲೇಷಣೆ.

ಅಂಥ ಸುಖೀ ಸಾಮ್ರಾಜ್ಯವೊಂದು ಇದ್ದಿರಲಿಕ್ಕೂ ಸಾಧ್ಯವೇ? ಸಂಶಯವೇಳಬೇಕು. ಸಂಶಯವೆಂಬುದು ಕ್ರಿಯಾಶೀಲ ಮನಸ್ಸಿನ ಪ್ರತೀಕ. ಅಂಥ ಸಂಶಯಕ್ಕೆ ಉತ್ತರವೂ ಮತ್ತದೇ ರಾಮನೇ.

### ಹೂರಣ


ಗುರುವಾಣಿ

ಪ್ರಶ್ನೋತ್ತರ

ಜೈ ಅನ್ನಬನ್ನಿ ಜೈವಿಕ ಅನಿಲಕ್ಕೆ !

ಮಾಸದ ಗೋವು: ಗೀರ್


ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com



ಏಕೆಂದರೆ ಭಾರತೀಯ ನಂಬಿಕೆಯಲ್ಲಿ ರಾಮ ಆದರ್ಶ ಮಾತ್ರವಲ್ಲ; ಅದರ ಪ್ರಾಯೋಗಿಕ ಅನುಷ್ಠಾನಕ್ಕೆ ಸಾಕ್ಷಿ. ಸಮಾಜದ ಯಾವತ್ತೂ ಅಪಸವ್ಯಗಳಿಗೆ ಆ ಪುರಷನಲ್ಲಿ ಅವಕಾಶಗಳೇ ಇರಲಿಲ್ಲ. ಅನುಪಮ ಗುಣಗಳೆಲ್ಲವನ್ನೂ ಮೇಳೈಸಿ ವ್ಯಕ್ತಿ ರೂಪ ಪಡೆದರೆ ಏನಾಗಬಹುದೋ ಅದನ್ನು ಶ್ರೀ ರಾಮನೆನ್ನಬಹುದು. ಅಂಥ ದಿವ್ಯ ಸಾನ್ನಿಧ್ಯದ ತುಡಿತ ಸಹಜವಾಗಿಯೇ ಅಂದಿನ ಸಮಾಜದಲ್ಲಿ ನೆಲೆಯೂರಿತ್ತು. ಪ್ರಜಾವರ್ಗ ಪರಸ್ಪರರಲ್ಲಿ ರಾಮನನ್ನೇ ಕಾಣುತ್ತಿದ್ದರು. ರಾಮ ಸ್ಮರಣೆಗೆ ಕ್ಷಣ ವಿಸ್ಮೃತಿ ಆವರಿಸಿದರೂ ಜೀವಿತದ ಅಮೂಲ್ಯವೊಂದನ್ನು ಕಳೆದುಕೊಂಡು ಬಿಡುವ ಆತಂಕ ಇದಕ್ಕೆ ಕಾರಣ. ಹೀಗಾಗಿ ಎಲ್ಲರಲ್ಲಿಯೂ ಎಲ್ಲರೂ ಶ್ರೀರಾಮಚಂದ್ರನನ್ನೇ ಆರೋಪಿಸಿಕೊಂಡು ಗೌರವಿಸುತ್ತಿದ್ದರು. ರಾಮದ್ವೇಷಿಗಳೇ ಇಲ್ಲದ ನೆಲದಲ್ಲಿ ಎಲ್ಲರಲ್ಲೂ ರಾಮಬಿಂಬಗಳೇ ಪ್ರತಿಫಲಿಸುತ್ತಿದೆ ಎಂದಾಗ ಪರಸ್ಪರರನ್ನು ಗೌರವಿಸಿಕೊಳ್ಳುವುದು ಅಸಂಗತವೇನೂ ಅಲ್ಲ. ಅದೇ ರಾಮರಾಜ್ಯದ ತಿರುಳು. ಯಾರನ್ನು ಯಾರೂ ಕೊಲ್ಲುವ, ಕಂಗೆಡಿಸುವ, ವಂಚಿಸುವ, ದ್ವೇಷಿಸುವ ಪ್ರಶ್ನೆಯೇ ಅಲ್ಲಿ ಬರುವುದಿಲ್ಲ. ಪಾಪ ಕರ್ಮವೆಂಬ ಪದಕ್ಕೆ ರಾಮರಾಜ್ಯದ ನಿಘಂಟಿನಲ್ಲಿ ಸ್ಥಾನವೇ ಇರಲಿಲ್ಲ ಎಂದರೆ ಈಗ ಅರ್ಥವಾದೀತು.

ಅಂಥ ರಾಮರಾಜ್ಯ ಈ ಉಪಖಂಡದ ಭಾಗವಾಗಿತ್ತು ಎಂಬುದರ ಸ್ಮರಣೆ ನಿಜಕ್ಕೂ ಈಗ ಪ್ರಸ್ತುತವಲ್ಲವೇ? ಅದಕ್ಕಾಗಿಯೇ ರಾಮಸತ್ರದ ಆಯೋಜನೆ. ರಾಮಾಯಣದ ಸನ್ನಿವೇಶಗಳನ್ನು ದೃಶ್ಯೀಕರಿಸಿಕೊಂಡಾದರೂ ಒಮ್ಮೆ ಆ ಯುಗಕ್ಕೆ ಹೋಗಿ ಬರುವ ಪ್ರಯತ್ನವಿದು. ಶ್ರೀ ರಾಮಚಂದ್ರಾಪುರಮಠದಲ್ಲಿ ಅತ್ಯಂತ ವಿಶಿಷ್ಟ, ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ, ಧಾರ್ಮಿಕ ವಿಧಿವಿಧಾನಗಳ ಮೂಲಕ ರಾಮಾಯಣದ ಪ್ರತೀ ಘಟನೆಗಳೂ ಈ ಸಂದರ್ಭದಲ್ಲಿ ಸಂಯೋಜನೆಗೊಳ್ಳಲಿವೆ. ಇದೇ ಏಪ್ರಿಲ್ ೧೪, ೧೫ರಂದು ಎರಡು ದಿನಗಳ ಕಾಲ ನಡೆಯಲಿರುವ ಈ ಸಾರ್ಥಕ ಆಚರಣೆಯಲ್ಲಿ ನಾವೂ ಭಾಗವಾಗುವುದು ಔಚಿತ್ಯಪೂರ್ಣವಲ್ಲವೇ? ಶ್ರೀ ರಾಮ ಸಮಾಜದ ಆದರ್ಶಗಳನ್ನು ಭಾರತದ ಜನ ಮಾನಸದಲ್ಲಿ ಚಿರಂತನವಾಗಿಸುವ ಬನ್ನಿ.

**ಹರೇ ರಾಮ.**

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ದನದ ಸಗಣಿಯಿಂದ ಶಕ್ತಿ ಉತ್ಪಾದಿಸಬಹುದೇ?

ಉ: ದನದ ಸಗಣಿಯಿಂದ ಬೆರಣಿ ಮಾಡಿ ಒಲೆ ಉರಿಸಲಾಗುತ್ತದೆ. ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಬೆರಣಿಯು ಒಂದು ಪ್ರಮುಖ ಉರುವಲು. ದನದ ಸಗಣಿಯಲ್ಲಿ ಮಿಥೇನ್ ಅನಿಲ ಇರುತ್ತದೆ. ಗೋಬರ್‌ಗ್ಯಾಸ್ ಸ್ಥಾವರಗಳಲ್ಲಿ ಸಗಣಿಯಿಂದ ಮಿಥೇನ್ ಅನಿಲ ಬೇರ್ಪಡಿಸಿ, ಅಡುಗೆ ಮಾಡಲು ಹಾಗೂ ದೀಪ ಬೆಳಗಿಸಲು ಶುಭ್ರವಾದ ಇಂಧನವಾಗಿ ಬಳಸಬಹುದು. ನಮ್ಮ ದೇಶದಲ್ಲಿ ಈಗಾಗಲೇ ಲಕ್ಷಾಂತರ ಗ್ರಾಮೀಣ ಕುಟುಂಬಗಳು ಈ ಸರಳ ತಂತ್ರಜ್ಞಾನದ ಲಾಭ ಪಡೆಯುತ್ತಿವೆ. ಹೆಂಗಸರು ಹೊಗೆಯಿಂದ ಮುಕ್ತಿ ಪಡೆದಿದ್ದಾರೆ. ಗ್ಯಾಸ್ ತೆಗೆದ ನಂತರ ಉಳಿಯುವ ಸಗಣಿಯ ಸ್ಲರಿ ಉತ್ತಮ ಗೊಬ್ಬರವಾಗಿಯೂ ಬಳಕೆಯಾಗುತ್ತದೆ.

ಪ್ರ: ಹಸುಗಳ ಸಗಣಿಯಿಂದ ವಿದ್ಯುತ್ ಉತ್ಪಾದಿಸಬಹುದೇ?

ಉ: ಸಗಣಿಯಿಂದ ಮಿಥೇನ್ ಗ್ಯಾಸ್ ಉತ್ಪಾದಿಸಿ, ಟರ್ಬೈನ್‌ಗಳನ್ನು ತಿರುಗಿಸಿ ವಿದ್ಯುತ್ ಉತ್ಪಾದನೆ ಮಾಡಬಹುದು. ಅಮೇರಿಕದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಬಕ್ ಜೋನ್ಸ್ ಎಂಬ ವ್ಯಕ್ತಿ ಇನ್‌ಲ್ಯಾಂಡ್ ಎನರ್ಜಿ ಕಾರ್ಪೋರೇಶನ್ ಎಂಬ ವಿದ್ಯುತ್ ಉತ್ಪಾದನೆ ಸಂಸ್ಥೆಯನ್ನು ಸ್ಥಾಪಿಸಿದ್ದಾನೆ. ಇಲ್ಲಿ ಹಸುಗಳ ಸಗಣಿಯನ್ನು ಬಳಸಿಕೊಂಡು ೫೦ ಮೆಗಾ ವ್ಯಾಟ್ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಈ ಬಗೆಯ ಯೋಜನೆಗಳಲ್ಲಿ ಇದೇ ಪ್ರಪಂಚದ ಅತ್ಯಂತ ದೊಡ್ಡ ಯೋಜನೆ.

ಪ್ರ: ಸಗಣಿ ವಿದ್ಯುತ್ ಸ್ಥಾವರಗಳನ್ನು ಭಾರತದಲ್ಲೂ ಸ್ಥಾಪಿಸಬಹುದೇ?

ಉ: ಧಾರಾಳವಾಗಿ ಸ್ಥಾಪಿಸಬಹುದು. ತಂತ್ರಜ್ಞಾನವಂತೂ ಸಿದ್ಧವಾಗಿದೆ. ಅಮೇರಿಕದಿಂದ ತಂತ್ರಜ್ಞಾನವನ್ನು ಪಡೆದುಕೊಳ್ಳಬಹುದು, ಅಥವಾ ದೇಶೀಯವಾಗಿ ಅಭಿವೃದ್ಧಿಪಡಿಸಬಹುದು. ಅಂಥ ಸಣ್ಣ ಪ್ರಮಾಣದ ವಿದ್ಯುತ್ ಸ್ಥಾವರಗಳನ್ನು ಪ್ರತಿ ಗ್ರಾಮದಲ್ಲಿಯೂ ಸ್ಥಾಪಿಸಿದರೆ, ವಿದ್ಯುತ್ತಿನಲ್ಲಿ ಸ್ವಾವಲಂಬಿಗಳಾಗಬಹುದು ಹಾಗೂ ಕೃಷಿ ಮತ್ತು ಆಹಾರ ಸಂಸ್ಕರಣೆ ಕೈಗಾರಿಕೆಗಳನ್ನು ಪ್ರಾರಂಬಿಸಬಹುದು. ಗ್ರಿಡ್ ಮೇಲಿನ ಅವಲಂಬನೆ ಕಡಿಮೆಯಾಗುವುದು.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ)

# ಜೈ ಅನ್ನಬನ್ನಿ ಜೈವಿಕ ಅನಿಲಕ್ಕೆ !

**ಅಡುಗೆ ಮನೆಯ ತಂಗಳು ತ್ಯಾಜ್ಯಗಳನ್ನು ಪ್ರೀತಿಯಿಂದ ಗೋವುಗಳಿಗೆ ತಿನ್ನಿಸಿ, ಗೋ ಅನಿಲದಿಂದ ಅಡುಗೆ ಬೇಯಿಸುವ ತಂತ್ರಜ್ಞಾನ ಈಗ ತುಂಬಾ ಸುಧಾರಿಸಿದೆ. ಅಡುಗೆ ಮನೆಯ ತಂಗಳು ತ್ಯಾಜ್ಯದಿಂದ ನೇರವಾಗಿ ಜೈವಿಕ ಅನಿಲ ಪಡೆಯಬಹುದಾಗಿದೆ. ಆದರೆ ಈಗಲೂ ನಗರಗಳ ಒಳಗಲ್ಲಿಗಳಲ್ಲಿ ಡೇರಿ ಹಸು ಸಾಕಣೆ ಮಾಡುವವರು ಗೋಬರ್‌ಗ್ಯಾಸ್ ಕಡೆ ಗಮನ ಹರಿಸುತ್ತಿಲ್ಲ. ಯಾರಾದರೂ ವಿಜ್ಞಾನಿಗಳು ಮಿಥೇನ್ ಅನಿಲವನ್ನು ಸಿಲಿಂಡರಿಗೆ ತುಂಬುವ ತಂತ್ರವನ್ನು ತಿಳಿಸಿದ್ದರೆ ಏನೆಲ್ಲ ಅನುಕೂಲ ಸಾಧ್ಯವಿದೆ....**

**ಮೂ**ರು ದಶಕಗಳ ಹಿಂದಿನ ಮಾತು: ನಮ್ಮ ದೇಶದ ಕೆಲವು ಹಳ್ಳಿಗಳಲ್ಲಿ ದನಗಳ ಸೆಗಣಿಯಿಂದ ಇಂಧನ ಅನಿಲ ಹೊಮ್ಮುತ್ತದೆಂಬ ವಿಚಾರ ಅಮೆರಿಕದ ಪ್ರಿನ್ಸ್‌ಟನ್ ವಿವಿಯ ಇಬ್ಬರು ವಿಜ್ಞಾನಿಗಳಿಗೆ ಅದೇ ತಾನೆ ಗೊತ್ತಾಯಿತು. ಕುತೂಹಲ ತಡೆಯಲಾರದೆ ಅವರು ಅಲ್ಲಿ ಪ್ರಯೋಗಕ್ಕೆ ಸಿದ್ಧರಾದರು. ಆದರೆ ಅಮೆರಿಕದಲ್ಲಿ ಗೋವುಗಳಿಲ್ಲ ಗೊತ್ತಲ್ಲ? ಅಲ್ಲಿ ದೊಡ್ಡ ದೊಡ್ಡ ರ್‍ಯಾಂಚ್‌ಗಳಲ್ಲಿ ಯಂತ್ರಗಳಂತೆ ಇರುವುದೆಲ್ಲ ಕ್ಯಾಟ್ಲ್‌ಗಳು. ಅವಕ್ಕೆ ಬೇಕಿದ್ದರೆ 'ದನಗಳು' ಎನ್ನಿ, ಆದರೆ ಅವು ಗೋವುಗಳಲ್ಲ. ಮೇಲಾಗಿ ಪ್ರಿನ್ಸ್‌ಟನ್ ಸಮೀಪ ಯಾವ ಗೋಮಾಳಗಳೂ ಇರಲಿಲ್ಲ. ನಮ್ಮಲ್ಲಿಯಂತೆ ಬೀದಿ ಬದಿಯಲ್ಲಿ ಸುತ್ತುವ ಕೋಲೆ ಬಸವಗಳೂ ಇಲ್ಲ. ಅಲ್ಲಿ ಇಲ್ಲಿ ಹುಡುಕಿ ಕೊನೆಗೆ ಯಾರದೋ ಪರಿಚಿತರ ಕುಟುಂಬದಲ್ಲಿ ಸಿಕ್ಕ ಒಂದೆರಡು ಕುದುರೆಗಳ ಲದ್ದಿಯನ್ನೇ ಬಾಟಲಿ ತುಂಬಿಸಿ ತಂದರು. ಅದರಲ್ಲೇ ಮೀಥೇನ್ ಗ್ಯಾಸ್ ಹೊಮ್ಮಿಸಿ, ಅದನ್ನೇ ವಿಶ್ಲೇಷಣೆ ಮಾಡಿ, ಎಷ್ಟು ಕಿಲೊ ಲದ್ದಿಯಿಂದ ಎಷ್ಟು ಘನ ಸೆಂಮೀ ಅನಿಲದ ಉತ್ಪಾದನೆ ಸಾಧ್ಯ ಎಂಬುದನ್ನು ಪರೀಕ್ಷಿಸಿ ಅದನ್ನೇ ಒಂದು ವೈಜ್ಞಾನಿಕ ಪ್ರಬಂಧವನ್ನಾಗಿ ಮಂಡಿಸಿದರು. ಸದ್ಯ, ಆ ದಿನಗಳಲ್ಲಿ ಪೇಟೆಂಟ್ ಪೈಪೋಟಿ ಈಗಿನಷ್ಟು ಇರಲಿಲ್ಲ.

ಅಮೆರಿಕದ ವಿಜ್ಞಾನಿಗಳೇ ಆಸಕ್ತಿ ತಳೆದರೆಂದ ಮೇಲೆ ನಮ್ಮ ವಿಜ್ಞಾನಿಗಳು ಬಿಟ್ಟಾರೆಯೆ? ಇವರೂ ಲಗ್ಗೆ ಹಾಕಿದರು ಕೊಟ್ಟಿಗೆಗಳಿಗೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರೂ ಹಳ್ಳಿಗರ ಏಳ್ಗೆಗೆಂದು 'ಅಸ್ತ್ರ' ಎಂಬ ಸಂಘಟನೆಯನ್ನು ಆರಂಭಿಸಿ ತುಮಕೂರು ಜಿಲ್ಲೆಯ ಉಂಗ್ರ ಎಂಬ ಹಳ್ಳಿಗೆ ಹೋದರು. ಅಲ್ಲಿ ಯಾರದೋ ರೈತನ ಕೊಟ್ಟಿಗೆಗೆ ತಕ್ಕಡಿ ಸಮೇತ ಬೆಳ್ಳಂಬೆಳಿಗ್ಗೆ ಹೋಗಿ ಒಂದು ದನದ ಸೆಗಣಿಯನ್ನು ತೂಗಿ ನೋಡಿದರು. ಅದು ೨.೨ ಕಿಲೊ ಇತ್ತು. ಅದೇ ಸರಾಸರಿ ಇಳುವರಿ ಇರಬೇಕೆಂದು ಊಹಿಸಿ, ಊರಿನ ಎಲ್ಲಾ ದನಗಳ ಸಂಖ್ಯೆಯನ್ನು ಕೂಡಿಸಿ, ಒಟ್ಟೂ ಸೆಗಣಿಯ ಮೊತ್ತವನ್ನು ಗುಣಿಸಿ, ಒಟ್ಟಾರೆ ಅಲ್ಲೊಂದು 'ಸಮುದಾಯ ಗೋಬರ್ ಅನಿಲ ಘಟಕ' ಆರಂಭಿಸಿದರು.

ಎಲ್ಲಾ ಮೆಚ್ಚತಕ್ಕ ಸಂಗತಿಯೇ ಹೌದು. ಆದರೆ ಒಂದು ಎಡವಟ್ಟಾಗಿತ್ತು. ಸಮುದಾಯ ಘಟಕ ವಿಫಲವಾಯಿತು. ಮುಖ್ಯ ಕಾರಣ ಏನೆಂದರೆ, ಸೆಗಣಿಯ ಲೆಕ್ಕಾಚಾರ ತಪ್ಪಾಗಿತ್ತು. ಅದೆಷ್ಟೊ ದನಗಳು ಹಗಲೆಲ್ಲ ಮೇಯಲು ಹೋಗಿರುತ್ತಿದ್ದುದರಿಂದ ಅರ್ಧಕ್ಕರ್ಧ ಸೆಗಣಿಯೆಲ್ಲ ನಿಸರ್ಗಕ್ಕೇ ಅರ್ಪಣೆಯಾಗುತ್ತಿತ್ತು. ಇನ್ನು ಕೆಲವು ಎತ್ತುಗಳು ದುಡಿಮೆಗೆಂದು ಹೊಲಕ್ಕೆ ಹೋಗುತ್ತಿದ್ದವು. ಕೊಟ್ಟಿಗೆಯಲ್ಲಿದ್ದ ದನಗಳಲ್ಲೂ ಕೆಲವು ಕೇವಲ ಒಂದೂವರೆ ಕಿಲೊ ಸೆಗಣಿ ನೀಡುತ್ತಿದ್ದವು. ಸಂಶೋಧಕರ ಅಂದಾಜು ಲೆಕ್ಕಾಚಾರ ಎಡವಟ್ಟಾಗಿತ್ತು. ಅಂತೂ ನಿಗದಿತ ಮೊತ್ತದ ಅರ್ಧದಷ್ಟೂ ಸೆಗಣಿ ಸಿಗದೆ ಉಂಗ್ರ ಹಳ್ಳಿಯ ಸಮುದಾಯ ಗೋಬರ್ ಗ್ಯಾಸ್ ಘಟಕ ವಿಫಲವಾಯಿತು.




**ಪುಣೆಯ ಆರ್‌ತಿ ಬಯೋಗ್ಯಾಸ್ ಘಟಕ**

ದನಗಳಲ್ಲೂ ಕೆಲವು ಕೇವಲ ಒಂದೂವರೆ ಕಿಲೊ ಸೆಗಣಿ ನೀಡುತ್ತಿದ್ದವು. ಸಂಶೋಧಕರ ಅಂದಾಜು ಲೆಕ್ಕಾಚಾರ ಎಡವಟ್ಟಾಗಿತ್ತು. ಅಂತೂ ನಿಗದಿತ ಮೊತ್ತದ ಅರ್ಧದಷ್ಟೂ ಸೆಗಣಿ ಸಿಗದೆ ಉಂಗ್ರ ಹಳ್ಳಿಯ ಸಮುದಾಯ ಗೋಬರ್ ಗ್ಯಾಸ್ ಘಟಕ ವಿಫಲವಾಯಿತು.

ಹಾಗೆಂದು ದೇಶದ ಎಲ್ಲಾ ಇಂಥ ಘಟಕಗಳು ವಿಫಲವಾಗಿದೆ ಎಂದಲ್ಲ. ವಿಜ್ಞಾನಿಗಳ ನೆರವಿಲ್ಲದೆ, ಗ್ರಾಮೀಣ ಕುಶಲ ಕರ್ಮಿಗಳ ತಪ್ಪು ಒಪ್ಪಿನ ಯತ್ನಗಳಿಂದ ನಾನಾ ಬಗೆಯ ಲಕ್ಷಾಂತರ ಗೋ-ಅನಿಲ ಸ್ಥಾವರಗಳು ಇಂದು ಕೆಲಸ ಮಾಡುತ್ತಿವೆ. ೨೫ ವರ್ಷಗಳ ಹಿಂದೆ ಎರಡು ಮಾರಗಲದ ದೊಡ್ಡ ಬಾಯಿಯ ಬಾವಿಯಂಥ ಹೊಂಡ ತೋಡಿ ವೃತ್ತಾಕಾರದ ಸಿಮೆಂಟ್ ತೊಟ್ಟಿಯನ್ನು ನಿರ್ಮಿಸಿ ಅದರ ಮೇಲೆ ಕೊಪ್ಪರಿಗೆಯಂಥ ಡ್ರಮ್ಮನ್ನು ಅಚ್ಚುಕಟ್ಟಾಗಿ ಬೆಸುಗೆ ಹಾಕಿಸಿ ತಂದು ಅನಿಲ ಘಟಕಗಳ ಸ್ಥಾಪನೆ ಎಂದರೆ ಒಂದು ಯಜ್ಞ ಮಾಡಿದಷ್ಟೇ ಸಾಹಸದ ಕೆಲಸವಾಗಿತ್ತು.

ಕೆಲವೊಮ್ಮೆ ಬೆಸುಗೆ ಕಳಚಿ, ಅನಿಲ ಸೋರಿ ಇಡೀ ಕೆಲಸ ವ್ಯರ್ಥವಾಗುತ್ತಿದ್ದುದೂ ಉಂಟು. ಅದರ ಸುಧಾರಿತ ರೂಪವಾಗಿ 'ದೀನಬಂಧು' ಅನಿಲ ಘಟಕ ಬಂತು. ಸಿಮೆಂಟ್‌ನಿಂದಲೇ ಬಗ್ಗಡದ ತೊಟ್ಟಿಯ ಮೇಲೆ ಸ್ಥಿರವಾದ ಟೋಪಿ ಕೂರಿಸುವ ಅಗ್ಗದ ತಂತ್ರ ಜಾರಿಗೆ ಬಂತು. ಸರಕಾರಿ ಸಬ್ಸಿಡಿ ಬಂತು. ಗೊಬ್ಬರ ಅಥವಾ ಬೆರಣಿಯಾಗಿ ಮಾತ್ರ ಬಳಕೆಯಾಗುತ್ತಿದ್ದ ಸೆಗಣಿಗೆ ಹೊಸ ತಾಕತ್ತು ಬಂತು. ಮುಖ್ಯವಾಗಿ ಅಡುಗೆಯ ಇಂಧನವಾಗಿ, ಕೆಲವೆಡೆ ಬೆಳಕು ಹೊಮ್ಮಿಸಬಲ್ಲ ಶಕ್ತಿಯಾಗಿ, ಅಪರೂಪಕ್ಕೆ ನೀರೆತ್ತುವ ಪಂಪ್‌ನ ಚಾಲಕ ಶಕ್ತಿಯಾಗಿ ಗೋಬರ್ ಗ್ಯಾಸ್ ತಕ್ಕಮಟ್ಟಿಗೆ ತನ್ನ ಕೊಡುಗೆ ನೀಡುತ್ತಿದೆ. ನಮ್ಮ ದೇಶದ ಪಶು ಸಂಪತ್ತಿಗೆ ಹೋಲಿಸಿದರೆ ಸೆಗಣಿಶಕ್ತಿಯ ಬಳಕೆ ತೀರ ಕಡಿಮೆ ಎನ್ನಬೇಕು. ಹೈನು ಕ್ರಾಂತಿಯ ಜತೆಜತೆಗೇ ಅಷ್ಟೇ ಪ್ರಬಲವಾದ ಇಂಧನ ಕ್ರಾಂತಿಯನ್ನೂ ನಾವು ಸಾಧಿಸಲು ಸಾಧ್ಯವಿತ್ತು. ಆದರೆ ಆಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಗೋಬರ್ ಅನಿಲ ಘಟಕದ ಸ್ಥಾಪನೆ ಎಂದರೆ ಕನಿಷ್ಠ ಇಪ್ಪತ್ತು ಸಾವಿರ ರೂಪಾಯಿಗಳ ಹೂಡಿಕೆಯ ಬಾಬ್ತು ಎಂದೇ ಪ್ರಚಲಿತದಲ್ಲಿದೆ. ಅದೂ ಅಡುಗೆಯ ಕೆಲಸಕ್ಕೆ ಎಂದಮೇಲೆ ಗಂಡಸರು ಅದಕ್ಕೆ ಪ್ರಾಶಸ್ತ್ಯ ನೀಡುವುದಿಲ್ಲ. ಹೇಗೂ ಹೇರಳ ಕೃಷಿ ತ್ಯಾಜ್ಯದ ಉರುವಲು ಇದೆ ತಾನೆ ಎಂಬ ಭಾವನೆ.




**ಎರಡು ಸಿಂಟೆಕ್ಸ್ ಮಾದರಿಯ ಡ್ರಮ್‌ಗಳನ್ನು ಬಳಸಿ ರೂಪಿಸಿದ ಅಲ್ಪವೆಚ್ಚದ ಅನಿಲ ಸ್ಥಾವರ**

ಗೊತ್ತಿದ್ದವರಿಗೆ ಗೊತ್ತು ಗೋ ಅನಿಲದ ಮಹತ್ವ. ಒಲೆ ಹೊತ್ತಿಸುವ ಕಿರಿಕಿರಿಯನ್ನು ಅದು ನಿವಾರಿಸುತ್ತದೆ; ಸೌದೆ ಉರಿಸುವಾಗ ಹೊಮ್ಮುವ ಹೊಗೆ ಮತ್ತು ತೇಲುಕಣಗಳ ಮಾಲಿನ್ಯ ಇದರಲ್ಲಿ ಇರುವುದಿಲ್ಲ. ಅಡುಗೆ ಮನೆಯಲ್ಲಿ ಪಾತ್ರೆಗೆ ಮಸಿ, ಅಟ್ಟಣಿಗೆಗೆ ಮಸಿ, ಸೂರಿಗೆ ಮಸಿ ಹತ್ತುವ ರಗಳೆ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯ ಶ್ವಾಸಕೋಶಗಳು ಕೆಡುವುದಿಲ್ಲ (ಇದೇ ಉಂಗ್ರದಲ್ಲಿ ವಿಜ್ಞಾನಿಗಳು ಮಾಡಿದ ಇನ್ನೊಂದು ಅಂದಾಜಿನ ಪ್ರಕಾರ ಹಳ್ಳಿಯ ಹೆಂಗಸರು ಪ್ರತಿ ದಿನ ನಾಲ್ಕು ಪ್ಯಾಕೆಟ್ ಸಿಗರೇಟು ಸೇದಿದಷ್ಟೇ ಅಪಾಯಕಾರಿ ತೇಲುಕಣಗಳನ್ನು ಉಸಿರಿನ ಮೂಲಕ ಸೇವಿಸುತ್ತಾರೆ). ಗ್ರಾಮೀಣ ಮಹಿಳೆಯ ಈ ತೊಂದರೆಗಳನ್ನೆಲ್ಲ ಗಂಡಸರಿಗೆ ತಿಳಿಸಿ ಹೇಳಿ, ಸೆಗಣಿಯ ಸದ್ಬಳಕೆ ಮಾಡಬೇಕೆಂಬ ಅರಿವು ಮೂಡಿಸುವ ಕೆಲಸ ಇದುವರೆಗೂ ವ್ಯವಸ್ಥಿತವಾಗಿ ನಡೆದಿಲ್ಲ. ಅದನ್ನೊಂದು ಚಳವಳಿಯಾಗಿ ರೂಪಿಸಬೇಕಿತ್ತು. ಆಗಿಲ್ಲ.

ಸೆಗಣಿ ಅನಿಲದ ಮುಂದುವರಿದ ರೂಪವಾಗಿ ಈಗ ಬಯೊಗ್ಯಾಸ್ (ಜೈವಿಕ ಅನಿಲ) ಪ್ರಚಲಿತಕ್ಕೆ ಬರುತ್ತಿದೆ. ಪಟ್ಟಣ ಪ್ರದೇಶಗಳಲ್ಲಿ ಅಡುಗೆ ಮನೆಯ ತ್ಯಾಜ್ಯಗಳಿಂದಲೂ ಅಡುಗೆ ಅನಿಲ ಉತ್ಪಾದನೆ ಸಾಧ್ಯವೆಂಬ ಸಂಗತಿ ಗೊತ್ತಾಗುತ್ತಿದೆ. ಬೆಳಗಾವಿ, ಧಾರವಾಡದ ಮೂಲಕ ಈಗ ಶಿರಸಿಯಲ್ಲೂ ಪಟ್ಟಣದ ಇಕ್ಕಟ್ಟಿನ ಮನೆಯ ಹಿತ್ತಲಲ್ಲೇ ಲ್ಯಾಟ್ರಿನ್ ದ್ರವ್ಯಗಳನ್ನೂ ಅಡುಗೆಮನೆಯ ತ್ಯಾಜ್ಯಗಳನ್ನೂ ಒಂದಾಗಿ ಸೇರಿಸಬಲ್ಲ ಪುಟ್ಟ ಸಿಮೆಂಟ್-ಇಟ್ಟಿಗೆ ಘಟಕಗಳು ಬಂದವು. ಆರಂಭದಲ್ಲಿ ಎಲ್ಲಿಂದಾದರೂ ಹತ್ತಿಪ್ಪತ್ತು ಕಿಲೊ ಸೆಗಣಿಯನ್ನು ಸುರಿದು ಮೂರು ವಾರಗಳ ನಂತರ ಅನಿಲ ಉತ್ಪಾದಿಸಿ ನಂತರ ಮನೆಯ/ವರ ತ್ಯಾಜ್ಯಗಳಿಂದಲೇ ನಿರಂತರವಾಗಿ ಅನಿಲ ಪಡೆಯುವ ವಿಧಾನ ಅದು. ಪಟ್ಟಣಕ್ಕೆ ಬಂದಮೇಲೆ ಗೋವುಗಳನ್ನೂ ಗೋಮಯವನ್ನೂ ಮರೆತವರು ಕೂಡ ಎಲ್‌ಪಿಜಿ ಅಡುಗೆ ಅನಿಲದ ಬೆಲೆಯ ಬಿಸಿ ಏರುತ್ತಿದ್ದ ಹಾಗೆ, 'ನೀನಾರಿಗಾದೆಯೊ ಎಲೆ ಮಾನವ' ಹಾಡನ್ನು ಮತ್ತೆ ನೆನಪಿಸಿಕೊಳ್ಳುವ ಸಂದರ್ಭ ಬರತೊಡಗಿತು.

ಆದರೆ ಇಂಥ ಬಯೊಗ್ಯಾಸ್ ಘಟಕಗಳನ್ನು ನಿರ್ಮಿಸಲು ಕುಶಲ ಮೇಸ್ತ್ರಿಗಳು ಬೇಕು. ತುಸು ಎಡವಟ್ಟಾದರೆ ತುಂಬ ಕಷ್ಟ. ಯಾವುದೇ ರೀತಿಯಲ್ಲಿ ಅನಿಲ ಲೀಕ್ ಆಗದಂತೆ ಕಟ್ಟಬಲ್ಲ ಕುಶಲಿಗಳು ಎಲ್ಲ ಕಡೆ ಸಿಗುವುದಿಲ್ಲ.

ಇದಕ್ಕೆ ಉತ್ತರವೆಂಬಂತೆ ಕೇರಳದ ರಾಜಗಿರಿ ಕಾಲೇಜ್ ಆಫ್ ಸೋಶಿಯಲ್ ಸೈನ್ಸಸ್‌ನ ಉತ್ಸಾಹಿಗಳು ಪೋರ್ಟಬಲ್ ಜೈವಿಕ ಅನಿಲ ಘಟಕವನ್ನು ರೂಪಿಸಿದ್ದಾರೆ (ರೇಖಾಚಿತ್ರ ನೋಡಿ). ಸಿಂಟೆಕ್ಸ್ ಡ್ರಮ್‌ಗಳನ್ನೇ ಹೋಲುವ ಆದರೆ ಇನ್ನೂ ಹೆಚ್ಚಿನ ಬಾಳಿಕೆ ಬರುವ ಫೈಬರ್ ಅಚ್ಚಿನಿಂದ ಮಾಡಿದ, ಅರ್ಧ ಘನ ಮೀಟರಿನ ಈ ಡ್ರಮ್ ಮಾದರಿಯ ಘಟಕವನ್ನು ಅವರು ೬,೬೦೦ ರೂಪಾಯಿಗೆ ಮಾರುತ್ತಾರೆ ಎಂದು ಜನವರಿ ೨೦೦೮ರ 'ಅಡಿಕೆ ಪತ್ರಿಕೆ'ಯಲ್ಲಿ ಹೇಳಲಾಗಿದೆ. ಇದನ್ನು ಸ್ಥಾಪಿಸಲು ಒಂದು ಚದರ ಮೀಟರ್ ಜಾಗ ಸಾಕು. ಬೇಕೆಂದಾಗ ಅಥವಾ ಬೇಡವೆಂದಾಗ ಎತ್ತಿ ಬೇರೆಡೆ ಇಡಬಹುದು. ಆರಂಭದಲ್ಲಿ ೬೦ ಕಿಲೊ ಸೆಗಣಿ ಹಾಕಬೇಕು. ಆಮೇಲೆ ಹಣ್ಣಿನ ಸಿಪ್ಪೆ, ತರಕಾರಿ ಸಿಪ್ಪೆ, ಸೊಪ್ಪು, ಹಳಸಲು ಅನ್ನ, ಸಾಂಬಾರ್, ಗಂಜಿ ತಿಳಿ ಇತ್ಯಾದಿ ತ್ಯಾಜ್ಯಗಳನ್ನು ಎರಡು ಮೂರು ಕಿಲೊದಷ್ಟು ಹಾಕಬಹುದು. ಪ್ರತಿದಿನ ಬೆಳಿಗ್ಗೆ ಅರ್ಧಗಂಟೆ, ಸಂಜೆ ಅರ್ಧಗಂಟೆ ನೀಲಿ ಜ್ವಾಲೆಯ ಎಲ್‌ಪಿಜಿ ಮಾದರಿಯ ಅನಿಲ ಸಿಗುತ್ತದೆ. ಲ್ಯಾಟ್ರಿನ್‌ಗೆ ಸಂಪರ್ಕ ಸೇರಿಸುವ ಪ್ರಶ್ನೆಯೇ ಇಲ್ಲ. ಇದೇ ವಿನ್ಯಾಸದ ಆದರೆ ಇಮ್ಮಡಿ ಅನಿಲ ಹೊಮ್ಮಿಸಬಲ್ಲ ಒಂದು ಘನಮೀಟರಿನ ಘಟಕವೂ ಇದೆ. ಅದಕ್ಕೆ ೧೨,೭೫೦ ರೂಪಾಯಿ ಬೆಲೆ ಇದೆ. ಖರೀದಿಸಬಯಸುವವರು ಸಾಗಣೆ ವೆಚ್ಚವನ್ನು ಭರಿಸಲು ತಯಾರಿದ್ದರೆ ಲಾರಿಯ ಮೂಲಕ ದೂರದ ಊರುಗಳಿಗೂ ಇಡೀ ಘಟಕವನ್ನು ರವಾನಿಸುತ್ತೇವೆಂದು ಈಗಾಗಲೇ ಇನ್ನೂರಕ್ಕೂ ಹೆಚ್ಚು ಘಟಕಗಳನ್ನು ಪೂರೈಸಿದ ಕಾಲೇಜಿನ 'ಔಟ್ ರೀಚ್ ಸೇವಾ ಸಂಘ'ದ ಮುಖ್ಯಸ್ಥ ಫಾದರ್ ಎಮ್.ಕೆ. ಜೋಸೆಫ್ ಹೇಳಿದ್ದಾರೆ.

ಅವರ ಸಂಪರ್ಕ: ಫೋನ್ ೦೪೮೮೪೨೫೫೮೮೯೫, ಇಮೇಲ್: rossrajagiri@gmail.com

ಪುಣೆಯ 'ಆರ್ತಿ' (Appropriate Rural Technology Institute) ಸಂಸ್ಥೆಯ ಅಧ್ಯಕ್ಷ ಡಾ. ಆನಂದ್ ಕರ್ವೆ ಎಂಬವರು ರೂಪಿಸಿದ ಬಯೊಗ್ಯಾಸ್ ಘಟಕ ಇನ್ನೂ ಹೆಚ್ಚಿನ ದಕ್ಷತೆಯುಳ್ಳದ್ದೆಂದು ಪ್ರತೀತಿ ಪಡೆದಿದೆ. ನೀರು ತುಂಬಿಸಲೆಂದು ಎಲ್ಲೆಡೆ ಬಳಸುವ ಸಿಂಟೆಕ್ಸ್ ಮಾದರಿಯ ಎರಡು ಪ್ಲಾಸ್ಟಿಕ್ ಟ್ಯಾಂಕ್‌ಗಳನ್ನೇ ಅವರು ಒಂದರ ಮೇಲೆ ಇನ್ನೊಂದನ್ನು ತಲೆ ಕೆಳಗಾಗಿ ಇಟ್ಟು ಅವರು ಅಲ್ಪವೆಚ್ಚದ ಅನಿಲ ಘಟಕವನ್ನು ತಯಾರಿಸಿದ್ದಾರೆ. ಇದು ಮಾಮೂಲಿ ಸೆಗಣಿ ಅನಿಲದ ಘಟಕಗಳಿಗಿಂತ ೪೦ ಪಟ್ಟು ಹೆಚ್ಚಿನ ದಕ್ಷತೆಯುಳ್ಳದ್ದೆಂದು ಸಂಸ್ಥೆಯ ಜಾಲತಾಣದಲ್ಲಿ ವಿವರಿಸಲಾಗಿದೆ. ಈ ಸಾಧನೆಗೆ ಪ್ರತಿಷ್ಠಿತ ಆಶ್‌ಡೆನ್ ಪ್ರಶಸ್ತಿ ಕೂಡ ಸಂಸ್ಥೆಗೆ ಸಿಕ್ಕಿದೆ. ಇದರಲ್ಲಿ ಸೆಗಣಿಯ ಬದಲು ಸಕ್ಕರೆಯ ಅಥವಾ ಪಿಷ್ಟದ ಅಂಶವುಳ್ಳ ತ್ಯಾಜ್ಯ ದ್ರವ್ಯಗಳನ್ನು (ಅಂದರೆ ಹಳಸಿದ ಹಿಟ್ಟು, ಕೆಟ್ಟುಹೋದ ಹಣ್ಣು-ತರಕಾರಿ, ಮೊಳಕೆ ಪದಾರ್ಥ ಮುಂತಾದವುಗಳನ್ನು) ಪ್ರತಿದಿನ ಡ್ರಮ್ಮಿಗೆ ಸುರಿಯುತ್ತಿದ್ದರೆ ದಿನವೂ ಎರಡು ಗಂಟೆಗಳ ಕಾಲ ಅಡುಗೆ ಮಾಡುವಷ್ಟು ಅನಿಲ ಹೊಮ್ಮುತ್ತದೆ. ಜಾಲ ತಾಣದಲ್ಲಿ ವಿವರಿಸಿದ ಪ್ರಕಾರ ಈ ಘಟಕದ ವಿನ್ಯಾಸವೂ ಸರಳವಾಗಿದೆ. ಹೆಚ್ಚಿನ ಮಾಹಿತಿಗೆ: www.arti-india.org/content/view/45/40

(ಸಂಪರ್ಕಕ್ಕೆ ಫೋನ್: ೨೦-೨೪೩೯೦೩೪೮, ೨೪೩೯೨೨೮೪ ಇಮೇಲ್: arti_pune@vsnl.net)



**ಬಯೋಗ್ಯಾಸ್ ಘಟಕದ ರೇಖಾಚಿತ್ರ**

ಅಂತೂ ದನಗಳಿಂದ ಆರಂಭವಾದ ಗೋಅನಿಲ ತಂತ್ರಜ್ಞಾನ ಈಗ ಬದಲಾಗಿದೆ. ದನಗಳಿಗೆ ತಿನ್ನಿಸುವ ಒಳಸುರಿಗಳಿಂದಲೇ ನೇರವಾಗಿ ಅನಿಲ ಪಡೆಯುವಲ್ಲಿಗೆ ಬಂದು ನಿಂತಿದೆ. (ಹಾಲನ್ನೂ ಅದೇ ರೀತಿ ಪಡೆಯುವಂತಿದ್ದರೆ...!!) ಹಾಗೆಂದು ದನಗಳ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ನಮ್ಮ ನಗರಗಳ ಸಂದುಮೂಲೆಗಳಲ್ಲಿ ಎಷ್ಟೋ ಕುಟುಂಬಗಳು ಹಸು ಸಾಕಣೆ ಮಾಡಿಕೊಂಡಿವೆ. ಡೇರಿಗೆ ಹಾಲು ಪೂರೈಸುವ ಹಾಗೂ ಸೆಗಣಿಯನ್ನು ಕಾಂಪೋಸ್ಟ್ ಮಾಡಿ ಮಾರುವ ಅವರು ಗೋಬರ್ ಅನಿಲ ಸ್ಥಾವರಗಳನ್ನು ಹೂಡಿಟ್ಟುಕೊಂಡ ಉದಾಹರಣೆ ಮಾತ್ರ ತೀರ ಅಪರೂಪ. ಅವರ ಸೆಗಣಿ ತಿಪ್ಪೆಗಳಿಂದ ಮೀಥೇನ್ ಅನಿಲ ವ್ಯರ್ಥ ವಾತಾವರಣಕ್ಕೆ ಸೇರಿ ಭೂಮಿಯನ್ನು ಇನ್ನಷ್ಟು ಬಿಸಿ ಮಾಡುವ ಕೆಲಸಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಎಲ್ಲೆಂದರಲ್ಲಿ ಎತ್ತೊಯ್ಯಬಹುದಾದ, ಅಲ್ಪ ವೆಚ್ಚದ, ಅಲ್ಪ ಸ್ಥಳಾವಕಾಶದಲ್ಲೇ ಸಾರ್ಥಕ ಕೆಲಸ ಮಾಡಬಲ್ಲ ಗೋಬರ್ ಘಟಕಗಳನ್ನು ಅವರು ಸ್ಥಾಪಿಸಿಕೊಳ್ಳಬಹುದು. ಟೆಕ್ನಾಲಜಿ ಸಿದ್ಧವಿದೆ. ಹಸು ಸಾಕಣೆ ಮಾಡುವವರಿಗೆ ಆ ಮಾಹಿತಿಯನ್ನು ತಲುಪಿಸುವ ಕೆಲಸ ಆಗಬೇಕಿದೆ. ಡೇರಿಗೆ ಹಾಲು ಪೂರೈಸುವ ಎಲ್ಲರೂ ಅನಿಲ ಘಟಕಗಳನ್ನೂ ಹೂಡಿಟ್ಟುಕೊಳ್ಳಬೇಕೆಂದು ಕಡ್ಡಾಯ ಮಾಡಿದರೆ ಇನ್ನೂ ಉತ್ತಮ.

ಅದಕ್ಕಿಂತ ಮುಖ್ಯವಾಗಿ ಆಗಬೇಕಾದ ಕೆಲಸವೊಂದಿದೆ. ಅದನ್ನು ವಿಜ್ಞಾನಿಗಳೇ ಮಾಡಬೇಕು. ಗೋಬರ್ ಅನಿಲ ಅಥವಾ ಬಯೊಗ್ಯಾಸನ್ನು ಸಿಲಿಂಡರಿನಲ್ಲಿ ಒತ್ತಿ ತುಂಬಲು ಇದುವರೆಗೆ ಸಾಧ್ಯವಾಗಿಲ್ಲ. ಶಿರಸಿಯ ಕೆಲವು ಉತ್ಸಾಹಿ ರೈತರು ಯತ್ನಿಸಿ ಸೋತಿದ್ದಾರೆ. ವಿಜ್ಞಾನಿಗಳು ಇದೊಂದನ್ನು ಸಾಧ್ಯವಾಗಿಸಿದರೆ ನಗರಗಳಲ್ಲಿ ಹಸು ಸಾಕಣೆ ಮಾಡಿಕೊಂಡವರಿಗೆ ತುಂಬ ಅನುಕೂಲವಾಗುತ್ತದೆ. ನಗರಗಳ ಸುತ್ತ ಇರುವ ಪಶು ಸಂಗೋಪನೆ ಘಟಕಗಳೂ ಉತ್ಸಾಹದಿಂದ ಇಂಧನ ಅನಿಲ ಉತ್ಪಾದನೆಗೆ ತೊಡಗಬಹುದು.

ಭಾರತೀಯ ವಿಜ್ಞಾನಿಗಳು ಮೀನಮೇಷ ಮಾಡಿದರೆ ಪ್ರಿನ್ಸ್‌ಟನ್‌ನಲ್ಲೋ ಕ್ಯಾಲಿಫೋರ್ನಿಯಾದಲ್ಲೊ ಯಾವನೋ ವಿಜ್ಞಾನಿ ಕುದುರೆಯ ಲದ್ದಿಯಿಂದಾದರೂ ಸರಿ, ಮೀಥೇನ್ ಅನಿಲವನ್ನು ಉತ್ಪಾದಿಸಿ ಅದನ್ನು ಸಿಲಿಂಡರಿನಲ್ಲಿ ತುರುಕಿ ತುಂಬುವ ವಿಧಾನವನ್ನು ಕಂಡುಹಿಡಿದಾನು. ಅದನ್ನು ತನ್ನ ಹೆಸರಿನಲ್ಲಿ ಪೇಟೆಂಟ್ ಮಾಡಿಕೊಂಡಾನು.

**– ನಾಗೇಶ ಹೆಗಡೆ**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಆರನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

## ಮಾಸದ ಗೋವು

# ಗೀರ್

ತನ್ನ ಆಯಾಚಿತ ಪ್ರತಿಸ್ಪರ್ಧಿ ವಿದೇಶಿ ತಳಿಗಿಂತ ಅದೇಷ್ಟೋ ಪಟ್ಟು ಉತ್ತಮವಿದ್ದರೂ ನಿರ್ಲಕ್ಷ್ಯದಿಂದ ಅಳಿವಿನಂಚಿಗೆ ಸರಿಯುತ್ತಿರುವ ಉತ್ಕೃಷ್ಟ ತಳಿ 'ಗೀರ್', ಈ ಬಾರಿಯ 'ಮಾಸದ ಗೋವು' ಅಂಕಣದ ದುರಂತ ನಾಯಕಿ.

೧೨-೧೪ ಲೀಟರ್ ಹಾಲು, ವಿದೇಶಿ ತಳಿಗಳಲ್ಲಿ ಕಾಣಸಿಗದ ಅಪೂರ್ವ ರೋಗ ನಿರೋಧಕಶಕ್ತಿ, ಭಾರತೀಯ ರೈತಜೀವನಕ್ಕೆ ಪೂರಕ ಕಷ್ಟಸಹಿಷ್ಣುತೆ, ಅಚ್ಚರಿ ಹುಟ್ಟಿಸುವಂತ ಬುದ್ಧಿಶಕ್ತಿ ಇವೆಲ್ಲವನ್ನು ಹೊಂದಿದ್ದರೂ ಒಂದು ತಳಿ ವಿನಾಶದ ಅಂಚಿಗೆ, ಜನರ ನಿರ್ಲಕ್ಷ್ಯಕ್ಕೆ ತುತ್ತಾಗಲು ಹೇಗೆ ಸಾಧ್ಯ ಅಂತ ನೀವು ತಲೆಕೆಡಿಸಿಕೊಂಡಿದ್ದರೆ –ಇದು ಭಾರತ ಸ್ವಾಮಿ!

ವಿಶ್ವದ ಯಾವುದೆ ಭಾಗಕ್ಕೆ ಹೋಗಿ ನೀವು ಹೈನುಗಾರರ ಬಳಿ 'ಗೀರ್'ನ ಬಗೆಗೆ ಪ್ರಸ್ತಾಪವೆತ್ತಿದರೆ ಕಣ್ಣರಳಿಸುವುದಂತೂ ಖಂಡಿತ. ಗೀರ್ ತಿಳಿಯದಿದ್ದರೂ ಗೀರ್‌ನ ವಿದೇಶಿ ಆವೃತ್ತಿ 'ಭ್ರಹ್ಮನ್' ಅಂತೂ ತಿಳಿದೇ ಇರುತ್ತಾರೆ. ಹೀಗೆ ವಿಶ್ವಮನ್ನಣೆಗಳಿಸಲು ಕಾರಣವಾದದ್ದು ಅದರ ಅದ್ಭುತ ರೋಗನಿರೋಧಕ ಶಕ್ತಿ ಮತ್ತು ದಿನಕ್ಕೆ ೧೪ ಲೀ ಹಾಲು ಕೊಡುವ ಸಾಮರ್ಥ್ಯ. ಭಾರತದ ಗೋಪರಂಪರೆಯಲ್ಲೂ ಹೈನುಗಾರಿಕೆ ತಳಿಗಳಲ್ಲಿ ಗೀರ್‌ಗೆ ವಿಶಿಷ್ಟ ಸ್ಥಾನ. ಭಾರತೀಯ ಗೋಪರಂಪರೆಯಲ್ಲಿ ಹೆಚ್ಚು ಹಾಲು ಕೊಡುವ ತಳಿಗಳಲ್ಲಿ ಇದು ಎರಡನೆಯದು. ಗುಜರಾತಿನ ಸೌರಾಷ್ಟ್ರದ ಬಳಿಯ ಗೀರ್ ಅರಣ್ಯಪ್ರದೇಶ ಇವುಗಳ ಮೂಲಸ್ಥಾನ. ಕಾಡಿನಿಂದ ಬಂದ ತಳಿಯಾದರೂ ಇದರ ಸಾಮಾಜಿಕ ಸ್ವಭಾವ ಅಪೂರ್ವವಾದದ್ದು. ತನ್ನ ಒಡೆಯನ ಪ್ರೀತಿಗೆ, ಮೈನೇವರಿಕೆಗೆ, ಮುದ್ದುಗೆರೆಯುವಿಕೆಗೆ ಇದು ಪ್ರತಿಸ್ಪಂದಿಸುವ ವಿಧಾನ ದೈವಿಕ ಆನಂದ ತರುವಂತದ್ದು ಎನ್ನುತ್ತರೆ ಹೈನುಗಾರರು.

ಗೀರ್ ದೊಡ್ಡಗಾತ್ರದ ತಳಿ. ದನಗಳು ೪೦೦-೪೫೦ ಕಿಲೊಗ್ರಾಮ್ ತೂಗಿದರೆ ಹೋರಿಗಳ ತೂಕ ೫೫೦ರಿಂದ ೬೫೦ಕೆ.ಜಿ. ಬಣ್ಣ ಕೆಂಪು ಮಿಶ್ರಿತ ಕಂದು. ಗೀರ್‌ನ್ನು ನೀವು ಬಹಳ ಸುಲಭವಾಗಿ ಗುರುತಿಸುವಂತೆ ಮಾಡುವುದು ಇದರ ಅಗಲ ಉಬ್ಬಿದ ಹಣೆ. ಗೀರ್‌ನ ಮತ್ತೊಂದು ಅಚ್ಚರಿಯೆಂದರೆ ಪ್ರಪಂಚದ ಯಾವುದೆ ಭಾಗಕ್ಕೆ ಹೋದರೂ ಗೀರ್‌ನ ಗುಣಲಕ್ಷಣ ಕೆಂಪು ಮಿಶ್ರಿತ ಕಂದು ಬಣ್ಣವಾಗಲಿ, ಅಗಲ ಮುಖವಾಗಲಿ, ಜೋತಾಡುವ ಕಿವಿಗಳಾಗಲಿ ಬದಲಾಗುವುದೇ ಇಲ್ಲ! ಈ ಜೋತಾಡುವ ಕಿವಿಗಳು ಕೆಳಗೆ ಒಂದನ್ನೊಂದು ತಾಕಿದರೆ ಅದನ್ನು ಪರಿಶುಧ್ಧ ಗೀರ್ ತಳಿಯಾಗಿ ಗುರುತಿಸುತ್ತಾರೆ. ಸಾಮನ್ಯವಾಗಿ ೨೧ ದಿನಕ್ಕೊಮ್ಮೆ ಬೆದೆಗೆ ಬರುತ್ತದೆ ಗೀರ್. 'ಗೀರ್ ತಳಿ ಬೆದೆ ಬರುವುದನ್ನು ಬಹಳ ಸುಲಭವಾಗಿ ಗುರುತಿಸಬಹುದು, ತಜ್ಞರ ಅಗತ್ಯವೇ ಇಲ್ಲದೆ ಗುರುತಿಸಬಹುದಾದಷ್ಟು ಸ್ಪಷ್ಟವಾಗಿ ಬೆದೆ ಲಕ್ಷಣಗಳು ತೋರುತ್ತವೆ' ಎನ್ನುತ್ತಾರೆ ಆನಂದ ಕೃಷಿ ವಿಷ್ವವಿದ್ಯಾನಿಲಯದ ಡಾ। ಸೋಳಂಕಿ. ಮೊದಲನೆ ಬೆದೆ ಬರುವುದು ೨೦-೨೪ ತಿಂಗಳುಗಳಲ್ಲಿ. ೩೬ ತಿಂಗಳಲ್ಲಿ ಮೊದಲ ಕರು. ಕರು ಈದ ನಂತರ ಅಜಮಾಸು ೩೦೦-೩೨೦ ದಿನ ಹಾಲು ಕೊಡುತ್ತದೆ. ೧೨-೧೫ ವರ್ಷಗಳ ಆಯುಸ್ಸಿನಲ್ಲಿ ೬-೧೦ ಕರು ಈಯುತ್ತದೆ. ಗೀರ್ ಭಾರತದ ಅತ್ಯಂತ ಪ್ರಾಚಿನ ತಳಿ ಅಂದರೆ ಬರೊಬ್ಬರಿ ೧೨೦೦ ವರ್ಷಗಳಷ್ಟು ಹಳೆಯದು!

- **ಮಧುಕೇಶ ದೊಡ್ಡೇರಿ**



ಗಿರ್, ಗುಜರಾತ್